ಮೈಸೂರ ಗೆಜೆಟ್ಟ

ಸರ್ಕಾರದಿಂದ ಘಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಅಕ್ಟೋಬರ್ ತಾ| 17, ಸ್ಯ 1885.

ಸೂಚನೆ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇವಕ್ಕೆ ದೇರಯಾಗಿ ಪ್ರಟ ಸಂಖ್ಯೆ ಕೊಡಲ್ಪಡುತ್ತೆ.

ವಿನೇ ಭಾಗ.

ಇಂಜ್ಯೂಗಮೆರ್ಚಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ವಗೈರೇರಿಂದ ಕೊಡೋಣಾದ ಇನ್ಸ್ಟ್ರಾರ್ ನಾಮೆಗಳು.

ಫಿನಾರ್ಷಿಯೆಲ್ ಇಲಾಖೆ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಗೆ, ಇದರ ಬಗೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್ನಲ್ಲಿ, ಸ್ಟ್ಯಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಆವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗಮಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಕ್ಷೇನ್ಸ್‌ಮೆಂಟ್ ಯಾನೇ ಷರಾ ಬಗ್ಗೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸ್‌ನಲ್ಲಿ ಮದ್ರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟೂದ ಡಿವಾಂಡ್ ವಾರಂಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಕ್ಷೇನ್ಸ್‌ಮೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸನ್, ಕಾಂಪ್ಟ್ರೋಲರ್.

ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಸಬ್‌ಜಡ್ಜ್‌ರೀಯವರ ಕೋರ್ಟ್‌ನಲ್ಲಿ.

1885ನೇ ಇಸವಿ ಮಿಸಲೇನಿಯಸ್ ನಂಬರ್ 410.

ದೆಂಗಳೂರು ಕೊವಟಿಪೇಟೆ ಸ್ಥಳದ ಮೃತಪಟ್ಟ ವೆಂಕಟೇಶಪ್ಪನ ಮಗ ಅಚ್ಚುತಯ್ಯನ ಆಸ್ತಿ ವಿಷಯದಲ್ಲಿ—ಮೃತಪಟ್ಟ ಅಚ್ಚುತಯ್ಯನಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಬೆಂಗಳೂರು ವಾಸಸ್ಥಳಾದ ವೆಂಕಟಮ್ಮನು, ಸದರಿ ವಾಸಸ್ಥಳನಾಗಿ ಮೃತಪಟ್ಟ ಅಚ್ಚುತಯ್ಯನ ಕೆವರ ಬೆಂದಗಿ ಬಗ್ಯಾಗಿ ಬರತಕ್ಕ 2,000 ರೂಪಾಯಿಗಳ ಸಾಲವನ್ನು ವಸೂಲ್ ಮಾಹುದಕ್ಕೆ 1860ನೇ ಇಸವಿ 27ನೇ ಅಕ್ಟೋಬರಿಗೆ ಸರಟಿಫಿಕೇಟ್ ಬಗ್ಗೆ ಈ ಕೋರ್ಟ್‌ಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ವೆಂಕಟಮ್ಮನ ಅರ್ಜೀಯನ್ನು 1885ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 29ರಲ್ಲು ಕೇಳಿ, ಸರ್ಟಿಫಿಕೆಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಶೆಮಾಡಲ್ಪಡುತ್ತೆ. ಆ ಕಾಲವಲ್ಲಿ ಸದರೀ ಮೃತಪಟ್ಟ ಅಚ್ಚುತಯ್ಯನ ಆಸ್ತಿಗೆ ಹಕ್ಕುದಾರರಾದ ವಿಪ್ಪರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1885ನೇ ಇಸವಿ ಅಕ್ಟೋಬರ್ 1ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಕೈಸ್, ಸಬ್ ಜಡ್ಜ್.